# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 561 (540) |
| ಸದಸ್ಯರ ಹೆಸರು | : | ಭೀಮರಾವ್ ಬಸವರಾಜ್ ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ದಿನಾಂಕ | : | 20.08.2026 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಾಗೂ ಗ್ರಾಮೀಣ ಪ್ರದೇಶದ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು<br>ಬೀದರ್ ನಗರಸಭೆಯನ್ನು ಮಹಾನಗರಪಾಲಿಕೆಯಾಗಿ ಮೇಲ್ದರ್ಜೆಗೇರಿಸಿರುವ ಸಂದರ್ಭದಲ್ಲಿ 6 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 16 ಗ್ರಾಮಗಳು ಸೇರ್ಪಡೆಯಾಗಿವೆ. |
| ಆ) | ಬಂದಿದ್ದಲ್ಲಿ, ತ್ವರಿತ ಕಸವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮವೇನು? (ಮಾಹಿತಿ ನೀಡುವುದು) | ಬೀದರ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಾಗೂ ಪಾಲಿಕೆಗೆ ಸೇರ್ಪಡೆಯಾದ ಗ್ರಾಮೀಣ ಪ್ರದೇಶಗಳಲ್ಲಿ ಕಸ ವಿಲೇವಾರಿ ಸಮಸ್ಯೆ ನಿವಾರಣೆಗೆ ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಗಿನಂತಿದೆ.<br>1. 42 ಆಟೋ ಟಿಪ್ಪರ್ ವಾಹನಗಳ ಮೂಲಕ ಪ್ರತಿ ಮನೆಯಿಂದ ದಿನನಿತ್ಯ ತ್ಯಾಜ್ಯ ಸಂಗ್ರಹಣೆ (Door-to-Door Collection) ಮಾಡಲಾಗುತ್ತಿದೆ.<br>2. ತ್ಯಾಜ್ಯವನ್ನು ಮೂಲದಲ್ಲಿಯೇ ಹಸಿ, ಒಣ ಮತ್ತು ಹಾನಿಕಾರಕ ತ್ಯಾಜ್ಯಗಳಾಗಿ ವಿಂಗಡಿಸುವಂತೆ ಅರಿವು ಮೂಡಿಸಲು ಒಟ್ಟು 36 ಸಂಖ್ಯೆಯ SHG (community mobilizers) ಗಳು ಮೂಲಕ ದಿನನಿತ್ಯ ತ್ಯಾಜ್ಯ ಸಂಗ್ರಹಣೆ ವಾಹನಗಳ ಜೊತೆಗೆ ತೆರಳಿ ಅಗತ್ಯ ಸೂಚನೆಯನ್ನು ಸಾರ್ವಜನಿಕರಿಗೆ ನೀಡಲಾಗುತ್ತಿದೆ.<br>3. ಕಸ ಸಂಗ್ರಹಣೆ ವಾಹನಗಳಿಗೆ GPS ಅಳವಡಿಸಲಾಗಿದ್ದು, ಮಾರ್ಗ ಮತ್ತು ಕಾರ್ಯನಿರ್ವಹಣೆಯನ್ನು ನಿಯಮಿತವಾಗಿ ಮೇಲ್ವಿಚಾರಣೆಯು ಆರೋಗ್ಯ ನಿರೀಕ್ಷಕರುಗಳಿಂದ ಮಾಡಲಾಗುತ್ತಿದೆ.<br>4. ರಸ್ತೆ ಗುಡಿಸಿದ ಹಾಗೂ ರಸ್ತೆ ಬದಿಯಲ್ಲಿ ಬಿಸಾಡಿದ ತ್ಯಾಜ್ಯವನ್ನು 9 ಸಂಖ್ಯೆಯ ಟ್ರ್ಯಾಕ್ಟರ್ ಹಾಗೂ ಇತರೆ ವಾಹನಗಳ ಮೂಲಕ ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಣೆ ಮಾಡಲಾಗುತ್ತದೆ.<br>5. ಪ್ರಸ್ತುತ ಹಸಿ ತ್ಯಾಜ್ಯವನ್ನು ವಿಂಡ್ರೂಕಾಂಪೋಸ್ಟಿಂಗ್ ಮೂಲಕ ಒಟ್ಟು 50 ಟನ್ ಕಾಂಪೋಸ್ಟ್ ತಯಾರಿಸಲಾಗುತ್ತಿದೆ.<br>6. ಎಸ್.ಬಿ.ಎಂ 2.0 ಯೋಜನೆಯಡಿ ಅನುಮೋದಿತ 48 TPD capacity MRF ಒಣ ತ್ಯಾಜ್ಯವನ್ನು ಮರುಬಳಕೆ ಹಾಗೂ ಸಂಸ್ಕರಣಾ ಘಟಕಗಳನ್ನು ಅನುಷ್ಠಾನಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ. |

| | | |
|---|---|---|
| | | 7. ಎಸ್.ಬಿ.ಎಂ 2.0 ಯೋಜನೆಯಡಿ ಅನುಮೋದಿತ ಪಾರಂಪರಿಕ ತ್ಯಾಜ್ಯವನ್ನು ಪ್ರಮಾಣ 84,176 ಟನ್‌ನ್ನು ಈಗಾಗಲೇ Bioremediation ಮೂಲಕ ವಿಲೇವಾರಿ ಮಾಡಿ, ಜಾಗ ತೆರವುಗೊಳಿಸಲಾಗಿದೆ. ಸದರಿ ಕಾರ್ಯದಲ್ಲಿ 7000 ಟನ್ RDF ನ್ನು ಸಿಮೆಂಟ್ ಕಾರ್ಖಾನೆಗಳಿಗೆ ರವಾನಿಸಲಾಗಿದೆ.<br>8. ತದನಂತರ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ದುರ್ವಾಸನೆ ನಿಯಂತ್ರಣಕ್ಕಾಗಿ ದ್ರಾವಣ ಸಿಂಪಡಣೆ ಮಾಡಲಾಗುತ್ತಿದೆ.<br>9. ಬೀದರ ಮಹಾನಗರಪಾಲಿಕೆ ಸೇರ್ಪಡೆಯಾದ ಗ್ರಾಮೀಣ ಪ್ರದೇಶಗಳಲ್ಲಿ ವಾರದಲ್ಲಿ 2-ದಿವಸ ಪ್ರತಿ ಗ್ರಾಮಕ್ಕೆ ನಿಗದಿತ ವಾಹನ ಮತ್ತು ರೂಟ್ಸ್ ಚಾರ್ಟ್ ಸಿದ್ಧಪಡಿಸಲಾಗಿದ್ದು, ಪ್ರತಿ ಗ್ರಾಮದ ಮನೆಯಿಂದ ಕಸ ಸಂಗ್ರಹಣೆ ಹಾಗೂ ವಿಲೇವಾರಿ ಕೆಲಸ ಮಾಡಲಾಗುತ್ತಿದೆ.<br>10. ಸದರಿ ಪ್ರದೇಶಗಳಲ್ಲಿ ಈಗಾಗಲೇ ಇದ್ದ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ವ್ಯವಸ್ಥೆಯನ್ನು ಮಹಾನಗರ ಪಾಲಿಕೆಯ ವ್ಯವಸ್ಥೆಯೊಂದಿಗೆ ಏಕೀಕರಿಸಲಾಗುತ್ತಿದೆ.<br>11. ಸದರಿ ಪ್ರದೇಶಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯ, ಕಸ ಹಾಕುವ ಸ್ಥಳಗಳ ತೆರವು, ಅರಿವು ಜಾಗೃತಿ ಹಾಗೂ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮಕೈಗೊಳ್ಳುವ ಬಗ್ಗೆ, ಆಟೋ, ಟಿಪ್ಪರ್ ವಾಹನಗಳ ಧ್ವನಿವರ್ಧಕ ಮತ್ತು SHG (community mobilizers) ಗಳ ಮೂಲಕ ದಿನನಿತ್ಯ ತ್ಯಾಜ್ಯ ಸಂಗ್ರಹಣೆ ವಾಹನಗಳ ಜೊತೆಗೆ ತೆರಳಿ ಅಗತ್ಯ ಸೂಚನೆಗಳನ್ನು ನೀಡಲಾಗುತ್ತಿದೆ. |

**ಸಂಖ್ಯೆ: ನಅಇ 35 ಬಿಎಂಸಿ 2026 (ಇ)**

**(ಡಾ. ಯತೀಂದ್ರ ಸಿದ್ಧರಾಮಯ್ಯ)**
**ನಗರಾಭಿವೃದ್ಧಿ ಸಚಿವರು**